ವರದಿ ಸಲ್ಲಿಸಿ ಯೋಜನಾ ಪ್ರಾಧಿಕಾರ ಮಾಡಿದ್ದ ಆಪಾದನೆಗಳು ನಿಜವೆಂದೂ ಅಲ್ಲದೆ ಇತರ ನಗರ ಪಾಲಿಕೆಗೆ ನೀಡಬೇಕಾಗಿರುವ ತೆರಿಗೆಯನ್ನೂ ವೇಗ ಮಾಡಿದ್ದಾರೆಂದು ವರದಿಯಲ್ಲಿ ತಿಳಿಸಿದರು. ಸರ್ಕಾರ ಇದುವರೆವಿಗೆ ಈ ವರದಿ ಆಧಾರದಮೇಲೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿರುವ ಪ್ರೀಮಿಯರ್ ಸ್ಟುಡಿಯೋ ಮಾಲೀಕರು ಪರವಾನಗಿ ಇಲ್ಲದೆಯೇ ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿಸಿದ್ದು ಅಲ್ಲದೆ ಸ್ಟುಡಿಯೋಗಾಗಿ ಪರವಾನಗಿ ಇಶ್ಶಿರುವ ಸ್ಥಳವನ್ನು ದುರುಪಯೋಗಪಡಿಸಿಕೊಂಡು ಅಲ್ಲಿ ಷೂಟಿಂಗ್ ಶೆಡ್‌ನಲ್ಲಿ ಕಾರ್ಖಾನೆ ಹಾಗೂ ಸಾರಾಯಿ ದಾಸ್ತಾನಿಗೆ ಬಾಡಿಗೆ ಇಶ್ಶಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಬಂದಿದ್ದು ಅದರ ಬಗ್ಗೆ ಒಂದು ಸಮಿತಿಯನ್ನು ಸರ್ಕಾರವು ರಚಿಸಿ ವರದಿಯನ್ನು ಪಡೆಯಿತು. ಸಮಿತಿಯು ಯಾವ ಪ್ರಸಂಗಗಳಲ್ಲಿ ಅಧಿನಿಯಮ ಮತ್ತು ನಿಯಮ ಉಲ್ಲಂಘನೆ ಆಗಿದೆಯೋ ಅಂತಹ ಪ್ರಸಂಗಗಳಲ್ಲಿ ಸಂಬಂಧಿಸಿದ ಅಧಿಕಾರಿಗಳು ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿರುವುದು. ಅದರಂತೆ ಸ್ಟುಡಿಯೋ ಆವರಣದಲ್ಲಿ ಬಾಡಿಗೆಗೆ ಇರತಕ್ಕ ಸಂಸ್ಥೆಗಳ ಉಚ್ಚಾಟನೆಗೆ ಕ್ರಮ ಕೈಗೊಳ್ಳಲಾಗಿದೆ.

(ಖ) ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ಕರ್ನಾಟಕಾದ್ಯಂತ ದಿನಗೂಲಿ ಕೆಲಸಗಾರರು (ಎಲ್ಲ ಇಲಾಖೆಗಳಲ್ಲಿಯೂ) ತಮ್ಮ ಸೇವೆಯನ್ನು ಖಾಯಂಗೊಳಿಸುವಂತೆ ಒತ್ತಾಯಿಸಲು ಮುಷ್ಕರ ಹೂಡಿದ್ದಾರೆ. ಈಗಾಗಲೇ ಸರ್ಕಾರದ ಕೆಲಸಕಾರ್ಯಗಳು ಇವರ ಮುಷ್ಕರದಿಂದ ಸ್ಥಗಿತ ಗೊಂಡಿದ್ದರೂ, ಸರ್ಕಾರ ಇವರಿಗೆ ಕೊಟ್ಟ ಆಶ್ವಾಸನೆಯನ್ನು ಈಡೇರಿಸಿಲ್ಲ. ಸಮ ಕೆಲಸಕ್ಕೆ ನಮ್ಮ ಸಂಬಳ ''ಇಕ್ವಲ್ ಪೆ ಫಾರ್ ಇಕ್ವಲ್ ವರ್ಕ್'' ವೆಂಬ ತತ್ವ ಸರ್ಕಾರ ಒಪ್ಪಿದ್ದರೂ ಇದನ್ನು ಈಡೇರಿಸಲು ಯಾವುದೂ ಕ್ರಮ ಕೈಗೊಳ್ಳದೆ ದಿನಗೂಲಿ ಕೆಲಸಗಾರರ ನ್ಯಾಯಯುತಬೇಡಿಕೆಗಳಿಗೆ ಗಮನವೀಯದಿರುವುದು ತುಂಬಾ ಅನ್ಯಾಯ. ಈ ಬಗ್ಗೆ ಸರ್ಕಾರದ ಗಮನ ಸೆಳೆಯಲು ಈ ಸಾರ್ವಜನಿಕ ಮಹತ್ವದ ವಿಷಯದ ಗಮನ ಸೆಳೆಯಲು ಇಚ್ಛಿಸಿ ಪ್ರಸ್ತಾಪಿಸಲು ಅಧ್ಯಕ್ಷರ ಅನುಮತಿಯನ್ನು ಕೇಳಲಿಚ್ಛಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಬಹಳ ವರ್ಷಗಳಿಂದ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅದರಲ್ಲೂ ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿ ನೌಕರರನ್ನು ಎನ್.ಎಂ.ಆರ್.ನಲ್ಲಿ ನೇಮಿಸಿಕೊಳ್ಳುವ ಪದ್ಧತಿ ನಡೆದುಬಂದಿದೆ. ಈ ದಿನಗೂಲಿ ನೌಕರರನ್ನು ಕೆಲವು ನಿರ್ದಿಷ್ಟವಾದ ಕೆಲಸಗಳನ್ನು ಪೂರ್ಣಗೊಳಿಸಲು ನೇಮಿಸಿಕೊಳ್ಳಲಾಗುತ್ತಿತ್ತು. ಆ ಕೆಲಸ ಮುಗಿದನಂತರ ಅವರನ್ನು ಮುಂದುವರೆಸುವ ಅವಶ್ಯಕತೆ ಇರಲಿಲ್ಲ. ಇವರನ್ನು ನೇಮಿಸಿಕೊಳ್ಳುವಾಗ ಸಂವಿಧಾನದಲ್ಲಿ ಹೇಳಿರುವಂತೆ ಸಮಾನ ಅವಕಾಶ ಕೊಡಬೇಕೆಂಬ ತತ್ವವನ್ನು ಪಾಲಿಸಲಾಗುತ್ತಿಲ್ಲ. ಕರ್ನಾಟಕ ರಾಜ್ಯ ಸರಕಾರೀ ದಿನಗೂಲಿ ನೌಕರರ ಮಹಾ ಮಂಡಲಿ, ಹುಬ್ಬಳ್ಳಿ ಇವರು ದಿನಗೂಲಿ ನೌಕರರಿಗೂ ಸಹ ವ್ಯಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನೇಮಕಗೊಂಡ ಸರ್ಕಾರೀ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ಕೊಡಬೇಕೆಂದು ಸರ್ವೋಚ್ಚನ್ಯಾಯಾಲಯದ ಮುಂದೆ ಅರ್ಜಿಯನ್ನು ಸಲ್ಲಿಸಿದೆ.

ಸರ್ವೋಚ್ಚ ನ್ಯಾಯಾಲಯವು ಇದರ ಬಗ್ಗೆ ತನ್ನ ಅಂತಿಮ ನಿರ್ಣಯವನ್ನು ಕೊಡಬೇಕಾಗಿದೆ. ಅಲ್ಲಿಯವರೆಗೂ ದಿನಗೂಲಿ ನೌಕರರಿಗೆ ಈ ಎಲ್ಲಾ ಸೌಲಭ್ಯಗಳನ್ನು ಕೊಡಲು ಸಾಧ್ಯವಾಗಲಾಗದು. ಕೇಂದ್ರದ ಪಿಡಬ್ಲ್ಯೂಡಿ ಇಲಾಖೆಯ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಸಮಾನ ಕೆಲಸಕ್ಕೆ ಸಮಾನ ವೇತನವೆಂದು ಘೋಷಿಸಿದೆಯಾದರೂ ಇವರುಗಳ ಸೇವೆಯನ್ನು ಸಕ್ರಮಗೊಳಿಸುವ ಬಗ್ಗೆ ಯಾವ ತೀರ್ಪನ್ನೂ ನೀಡಿಲ್ಲ. ಇವರ ಸೇವೆಯನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರವು ಪರಿಶೀಲಿಸಬಹುದಾಗಿದೆಯೆಂದು ಮಾತ್ರ ಹೇಳಿದೆ. ಆದರೆ ಈಗಾಗಲೇ ಹೇಳಿರುವಂತೆ ಈ ದಿನಗೂಲಿ ನೌಕರರನ್ನು ನೇಮಿಸಿಕೊಳ್ಳುವುದರಲ್ಲಿ ಎಲ್ಲರಿಗೂ ಸಮಾನ ಅವಕಾಶವಿರಬೇಕೆಂಬ ಸಂವಿಧಾನದ ತತ್ವವನ್ನು ಪಾಲಿಸಿಲ್ಲ ಪಾಪದ್ದರಿಂದ ಇವರ ಸೇವೆಯನ್ನು ಸಕ್ರಮಗೊಳಿಸುವುದು ಕಷ್ಟಕರವಾಗುವುದು. ಕರ್ನಾಟಕ ರಾಜ್ಯ ಸರಕಾರೀ ದಿನಗೂಲಿ ನೌಕರರ ಮಹಾ ಮಂಡಲಿ, ಹುಬ್ಬಳ್ಳಿ ತಮಗೆ ಒಂದು ಸ್ಥಾನ ಮತ್ತು ಸೇವೆಯನ್ನು ಖಾಯಂ ಗೊಳಿಸುವುದು ಒಳಗೊಂಡಂತೆ ಬೇಡಿಕೆಗಳನ್ನು ಮುಂದಿಟ್ಟು ಇವುಗಳನ್ನು ಪೂರೈಸದಿದ್ದಲ್ಲಿ ಮುಷ್ಕರ ಹೂಡುವುದಾಗಿ ತಿಳಿಸಿದ್ದರು. ಈ ದಿನಗೂಲಿ ನೌಕರರಿಗೆ ಒಂದು ಸ್ಥಾನ ಕಲ್ಪಿಸಿಕೊಡುವುದು, ಅವರ ಸೇವೆಯನ್ನು ಸಕ್ರಮಗೊಳಿಸುವುದು ಇವುಗಳನ್ನು ಮೇಲೆ ಹೇಳಿದ ಕಾರಣ

ಗಳಿಂದಾಗಿ ಒಪ್ಪಲಾಗಲಿಲ್ಲ. ಆದಾಗ್ಯೂ ಅವರ ಇತರ ಬೇಡಿಕೆಗಳಾದ, ವರ್ಗಾವಣೆ ಮಾಡದಿರುವುದು ಕಿರುಕುಳ ಕೊಡುವುದು ಇವುಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿದೆ. ಇವರುಗಳ ಸೇವೆಯನ್ನು ಸಕ್ರಮಗೊಳಿಸುವುದರ ಬಗ್ಗೆ ಸರ್ಕಾರ ಯಾವ ಆಶ್ವಾಸನೆಯನ್ನೂ ನೀಡಿಲ್ಲ.

ಈ ನೌಕರರು ಮುಷ್ಕರ ಹೂಡಿದರೂ ಸಹ ಇವರು ನಿರ್ವಹಿಸುತ್ತಿರುವ ಕೆಲಸಕ್ಕೆ ಯಾವ ಅಡಚಣೆಯಾಗದೆಂದು ಭಾವಿಸಲಾಗಿದೆ.

(6) Regularisation of the services of local candidates working as temporary Lecturers.

SMT. MUKHTARUNNISA.—Sir, about 150 local candidates are working in various universities as temporary Lecturers since 10–15 years: Government have regularised the services of local candidates working in various departments *vide* G.O. No. DPAR 49 SLC 84 (1), Bangalore, dated 2nd July 1986. The Inter University Board under the chairmanship of Hon'ble Education Minister has resolved to confirm the services of local candidates working in various universities *vide* G.O. No.ED–1/UNI/86, dated 23rd September 1986. The Bangalore University has also regularised the services of local candidates vide G.O.No. EST/E3/Temp/Regin/31/1984–85, Bangalore dated 6–11–1986. The Mysore University in its Syndicate meeting held on 5th September 1986 has also passed a resolution requesting the Government to issue an ordinance amending the Universities Act for regularisation of the services of local candidates some of the Local condiates have been removed from service and some are on the list. Hence we urge the Government to intervene and issue directions to the concerned to reinstate the candidates already removed and not to remove the local candidates till the question is settled. We also urge the Government to issue an ordinance immediately and regularise the services of local candidates, so that justice is done equally to all the local candidates in Government services.

ಶ್ರೀ ಡಿ. ಮಂಜುನಾಥ್.—ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಈ ಪ್ರಶ್ನೆ ಉದ್ಭವಿಸಿದೆ ಈಗ ಸರ್ಕಾರದಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡತಕ್ಕವರನ್ನು ಕನ್‌ಫರ್ಮ್ ಮಾಡಬೇಕೆಂದು ಮೇಲೆ ವಿಶ್ವವಿದ್ಯಾನಿಲಯದಲ್ಲಿಯೂ ಮಾಡಬೇಕೆಂದು ಹೇಳುತ್ತಿದ್ದಾರೆ. ಅದಕ್ಕೆ ಅಲ್ಲೇ ಪ್ರತ್ಯೇಕವಾಗಿ ಒಂದು ಆರ್ಡಿನೆನ್ಸ್ ಮಾಡಬೇಕಾಗಿದೆ, ಆ ಬಗ್ಗೆ ಈಗಾಗಲೇ ವೈಸ್ ಚಾನ್ಸಲರ್‌ಗೆ ನೀವೇ ಆದನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿ ಎಂದು ಹೇಳಿದ್ದೇವೆ. ಇನ್ನೊಂದು ಸಾರಿ ಹೇಳಿ ಚರ್ಚೆ ಮಾಡಿ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ.

(೭) ಖಾಸಗೀ ಬಸ್ ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳುವುದರ ಬಗ್ಗೆ

ಶ್ರೀ ಬಸವರಾಜ ಹವಿಗಪ್ಪ ಪಾಟೀಲ್.—ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಖಾಸಗಿ ಬಸ್ಸುಗಳ ರಾಷ್ಟ್ರೀಕರಣವಾಗಿ ಸುಮಾರು ಒಂಬೂಭರೆ ವರ್ಷ ಮೇಲಾಗಿದ್ದು ಸದರಿ ವಾಹನಗಳಲ್ಲಿ ಕೆಲಸ ಮಾಡುತ್ತಿದ್ದ. ಚಾಲಕ ಹಾಗೂ ನಿರ್ವಾಹಕ ಮತ್ತು ಇತರ ಸಿಬ್ಬಂದಿ ವರ್ಗದವರನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಇನ್ನೂ ಕೆಲಸಕ್ಕೆ ತೆಗೆದುಕೊಂಡಿರುವುದಿಲ್ಲ. ಇದರಿಂದ ಅವರಿಗೆ ಬಹಳಷ್ಟು ತೊಂದರೆಯಾಗಿದೆ. ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೋ ಅಥವಾ ಇಲ್ಲವೋ ಎಂಬುದನ್ನು